# MYSORE STATE ELECTRICITY BOARD ANNUAL FINANCIAL STATEMENT.

## Motion to Consider (Debate Continued)

ಶ್ರೀ ಎಸ್. ಶಿವಪ್ಪ :—ಮಾನ್ಯ ಅಧ್ಯಕ್ಷರೇ ೧೯೭೦–೭೧ನೇ ಸಾಲಿಗೆ ತಯಾರಿಸಿದ ವಿದ್ಯುಚ್ಛಕ್ತಿಯ ಬಜೆಟ್ಟನ್ನು ನಮ್ಮ ಸಭೆಯ ಮುಂದೆ ಮಂಡಿಸಿದ್ದಾರೆ. ಇದನ್ನು ಮುಖ್ಯ ಮಂತ್ರಿಗಳು ಸಭೆಯಲ್ಲಿ ಓದಿದರು ತಾವು ಹೇಳೋಣವಾಯಿತು. ಆ ವಿಚಾರವೇನೇ ಇರಲಿ. ಈಗ ಇದು ನಮ್ಮ ಮುಂದೆ ಚರ್ಚೆಗೆ ಬಂದಿದೆ. ಇದರಲ್ಲಿ ಎಲೆಕ್ಟ್ರಿಸಿಟಿ ಬೋರ್ಡಿನವರು ಕೊಟ್ಟಿರತಕ್ಕ ನೋಟನ್ನು ನೋಡುವುದಾದರೆ ಇವರಲ್ಲಿ ಯಾವ ಒಂದು ಪಾಲಿಸಿ ಪ್ರಿನ್ಸಿಪಲ್ ಇದ್ದಂತೆ ಕಾಣುವುದಿಲ್ಲ. ಇವರ ಆಪರೇಷನ್ ವಿಚಾರದಲ್ಲಾಗಲಿ, ಎಕ್ಸ್‌ಪೆಂಡಿಚರ್ ವಿಚಾರದಲ್ಲಾಗಲೀ ಆಥವಾ ಕಾಸ್ಟಾಫ್ ಪ್ರೊಡಕ್ಷನ್ ವಿಚಾರದಲ್ಲಾಗಲಿ ಆಥವಾ ಹಾಕಿದ ಸಾಲಕ್ಕೆ ಬಡ್ಡಿತೆರತಕ್ಕ ವಿಚಾರದಲ್ಲಾಗಲಿ ಯಾವ ಒಂದು ಇತಿಮಿತಿ ಇದ್ದಹಾಗೆ ಕಂಡು ಬರುತ್ತಿಲ್ಲ. ಸಾಲದಕ್ಕೆ ಬೋರ್ಡಿನವರು ವರ್ಷ ವರ್ಷ ಶಿಬ್ಬಂದಿ ವೆಚ್ಚವನ್ನು ಅಳತೆ ಇಲ್ಲದಂತೆ ಹೆಚ್ಚಿಸಿಕೊಂಡು ಬರುತ್ತಿದ್ದಾರೆ. ೧೯೬೮–೬೯ರಲ್ಲಿ ಶಿಬ್ಬಂದಿ ವೆಚ್ಚ ೫೫ ಕೋಟಿ ೨೫ ಲಕ್ಷ ರೂ. ಗಳಿತ್ತು. ಈಗ ಅದು ೧೯೭೦–೭೧ಕ್ಕೆ ೬ ಕೋಟಿಗೇರಿದೆ. ಅಂದರೆ ಶೇಕಡಾ ೨೫ರಷ್ಟು ಹೆಚ್ಚಾಗಿದೆ ಇದು ಶಿಬ್ಬಂದಿ ವೆಚ್ಚದ ವಿಚಾರವಾಯಿತು. ಇನ್ನು ಹೀಗೇ ಆಪರೇಷ ಬಾಬಿನಲ್ಲಿ ಆರೂವರೆ ಲಕ್ಷ ರೂಪಾಯಿಗಳನ್ನು ಹೆಚ್ಚಿಸಿದ್ದಾರೆ. ಇವರು ಹಾಕಿರತಕ್ಕ ಬಂಡವಾಳಕ್ಕೆ ೧೯೭೦–೭೧ನೇ ಸಾಲಿಗೆ ೬ ಕೋಟಿ ೬೦ ಲಕ್ಷ ರೂಪಾಯಿಗಳನ್ನು ಬೆರೀ ಬಡ್ಡಿ ಒಂದಕ್ಕೆ ಕೊಡಬೇಕಾಗಿದೆ. ಇನ್ನು ಪವರ್ ಡಿಸ್ಟ್ರಿಬ್ಯೂಷನ್ ಬಗ್ಗೆ ರಿಜರ್ವ್ ಮಾಡಿರತಕ್ಕದ್ದು ೧೭ ಕೋಟಿ. ಹೀಗೆ ಮೂರು ಬಾಬುಗಳಿಗೇ ಅಪಾರ ಹಣ ಖರ್ಚಾಗಿದೆ. ಭಾರತದಲ್ಲೇ ಮೊದಲು ವಿದ್ಯುಚ್ಛಕ್ತಿಯನ್ನು ತಯಾರಿಸಿದ್ದಕೀರ್ತಿ ಮೈಸೂರಿನದು. ಆದಾಗ್ಯೂ ಇಲ್ಲಿ ದೇಶಾಭಿವೃದ್ಧಿ ಕೈಗಾರಿಕಾ ಬಾಬಿನಲ್ಲಿ ಇನ್ನು ಇತರೇ ಬಾಬುಗಳಲ್ಲಿ ಎಷ್ಟಾಗಬೇಕಾಗಿತ್ತೋ ಆಷ್ಟಾಗಿಲ್ಲ. ಆದ್ದರಿಂದ ಈ ಇಲಾಖೆ ಇಂಜಿನಿಯರಿಗೆ ಎಷ್ಟು ಅನುಕೂಲ ಮಾಡಿದೆ ಎಂಬುದನ್ನು ಇದರಿಂದಲೇ ನಾವು ಮನಗಾಣಬಹುದು.

ಇನ್ನು ಎರಡನೇಯದಾಗಿ ಶರಾವತಿ ಒಂದನ್ನು ಬಿಟ್ಟರೆ ಇನ್ನು ಉಳಿದ ಎಲ್ಲಾ ವಿದ್ಯುತ್ ಕೇಂದ್ರಗಳ ಆಡಳಿತವನ್ನು ಬೋರ್ಡಿನವರಿಗೆ ಬಿಟ್ಟುಕೊಟ್ಟಿದೆ. ಇದರಲ್ಲಿ ವಿದ್ಯುತ್ ಕೇಂದ್ರಗಳನ್ನು ಕಟ್ಟತಕ್ಕವರು ಅಂದರೆ ನಿರ್ಮಾಣ ಮಾಡತಕ್ಕವರು ಒಬ್ಬರು ಅವುಗಳ ಆಡಳಿತವನ್ನು ನಡೆಸತಕ್ಕವರು ಇನ್ನೊಬ್ಬರು. ಹೀಗೆ ಇದರಲ್ಲಿ ಡುಯ್ಯಲ್ ಆಡಳಿತವಿರುತ್ತದೆ. ಇವುಗಳನ್ನು ಕಟ್ಟತಕ್ಕವರು ಒಬ್ಬರು. ಕಂಟ್ರೋಲ್ ಮಾಡತಕ್ಕವರು ಇನ್ನೊಬ್ಬರು—ಆಡಳಿತ ಒಬ್ಬರ ಕೈಲಿ ಹೀಗೆ ಇದರ ವ್ಯವಹಾರ ಹರಿದು ಹಂಚಿಹೋಗಿದೆ. ಈ ಎಲ್ಲವನ್ನು ಯಾರಾದರೂ ಒಬ್ಬರು ಮಾಡಲಿ. ಅದಕ್ಕೆ ನಾನು ಬೇಡವೆನ್ನುವುದಿಲ್ಲ. ಈ ದಿವಸ ಎಲೆಕ್ಟ್ರಿಸಿಟಿ ಬೋರ್ಡ್ ಒಂದು ಸ್ಯಾಟ್ಯೂಟರಿ ಬಾಡಿ. ಆದ್ದರಿಂದ ಇವುಗಳನ್ನು ಕಟ್ಟತಕ್ಕ ಹಾಗೂ ಅವುಗಳನ್ನು ಮೈನ್‌ಟೇನ್ ಮಾಡತಕ್ಕ ಎಲ್ಲ ವ್ಯವಹಾರಗಳನ್ನೂ ಆ ಬೋರ್ಡಿನವರೇ ಮಾಡಲಿ. ಈ ಡುಯಲ್ ಆಡಳಿತದಿಂದ ಶಾಸನ ಸಭೆಗೆ ಇದರ ನಿಖರವಾದ ಖರ್ಚುವೆಚ್ಚಗಳು ಸಿಕ್ಕುತ್ತಿಲ್ಲ. ಆದ್ದರಿಂದ ನಾನು ಸರ್ಕಾರಕ್ಕೆ ಈ ಸಂದರ್ಭದಲ್ಲಿ ಸಲಹೆ ಮಾಡುವುದೇನೆಂದರೆ ಈ ವಿದ್ಯುಚ್ಛಕ್ತಿಗೆ ಸಂಬಂಧಪಟ್ಟ ಎಲ್ಲ ವ್ಯವಹಾರಗಳನ್ನೂ ಯಾರಾದರೂ ಒಬ್ಬರು ಮಾತ್ರ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಹಾಗಿಲ್ಲದೆ ಹೋದರೆ ಈ ಬಾಬಿನಲ್ಲಿ ನಿಖರವಾಗಿ ಖರ್ಚಾಗತಕ್ಕ ಹಣವೆಷ್ಟು ಎಂಬುದನ್ನು ಕಂಡುಹಿಡಿಯುವುದಕ್ಕೆ ಈ ಶಾಸನ ಸಭೆಗೆ ಬಹಳ ಕಷ್ಟವಾಗುತ್ತದೆ.

ಇನ್ನು ಎರಡನೇಯದಾಗಿ ಈ ಇಲಾಖೆಯ ವಿಚಾರದಲ್ಲಿ ಕೆಲವು ಬಹಳ ಗುರುತರವಾದ ಆಪಾದನೆಗಳಿರುತ್ತವೆ. ಇವರು ಅನುಸರಿಸುತ್ತಿರುವ ಪರ್ಚೇಜ್ ಪಾಲಿಯನ್ನು ಯಾವ ನೀತಿಯ ಮೇಲೆ ನಡೆಸಲಾಗುತ್ತಿದೆ ? ಈ ಕೊಳ್ಳತಕ್ಕ ಪಾಲಿಸಿಯನ್ನು ಇವರು ವರ್ಷ ವರ್ಷ ಏತಕ್ಕೆ ಬದಲಾಯಿಸುತ್ತಿದ್ದಾರೆ. ಸಾಮಾನ್ಯವಾದ ಒಂದು ನಿಯಮ ಎಂದರೆ ಯಾವ ಯಾವ ರಿಜಿಸ್ಟರ್ಡ್ ಫರ್ಮುಗಳಿವೆಯೋ ಅವುಗಳಿಂದ ಕೋಟೇಷನ್ ಕರೆದು ಅವುಗಳಲ್ಲಿ ಯಾವುದು ಅತ್ಯಂತ ಕಡಿಮೆ ಇರುತ್ತದೋ ಅಂಥದನ್ನು ಅಂಗೀಕರಿಸಬೇಕೆಂಬುದು ರಾಸ್ತೋಕ್ತವಾದ ಪದ್ಧತಿ. ಆದರೆ ಇಲ್ಲಿ ಅಂಥ ನಿರ್ದಿಷ್ಟವಾದ ಯಾವ ಒಂದು ಪದ್ಧತಿಯೂ ಇದ್ದಹಾಗಿಲ್ಲ. ಅಲ್ಲದೆ ವರ್ಷ ವರ್ಷಕ್ಕೆ ಈ ಪದ್ಧತಿಯನ್ನು ಬದಲಾಯಿಸುತ್ತಿದ್ದಾರೆ. ಏಕೆ ? ಏಕೆ ಇವರಲ್ಲಿ ಒಂದು ಅಧಿಕೃತ ನೀತಿ ಇಲ್ಲ.?

11-00 A. M.

ಈಪ್ರೊತ್ತು ತಾವು ಒಂದು ಕಡೆ ಹೇಳುತ್ತೀರಿ ಯಾವ ರಿಜಿಸ್ಟರ್ಡ್ ಮನುಫ್ಯಾಕ್ಚರಿರಿಗೆ ಫರ್ಮ್ಸ್ ಇವೆ ಅವುಗಳಿಂದ ನೇರವಾಗಿ ಟೆಂಡರ್ ಕಾಲ್‌ಫಾರ್ ಮಾಡಿ ಅವುಗಳಲ್ಲಿ ಯಾವುದು ಕಡಿಮೆ ಇದೆ ಅದರಿಂದ ಕೊಂಡುಕೊಳ್ಳುವ ನೀತಿಯನ್ನು ಅನುಸರಿಸಿಕೊಂಡು ಬರುತ್ತಾ ಇದ್ದೇವೆ ಎಂದು. ಇಂತಹ ಸಂದರ್ಭದಲ್ಲಿ ಹೊರಗಡೆಯಿಂದ ಆಪಾದನೆ ಬಂದಿದೆ ಏನೆಂದರೆ ಎಲೆಕ್ಟ್ರಿಸಿಟಿ ಬೋರ್ಡ್‌ನವರು ಕೊಳ್ಳತಕ್ಕಂಥ ಸಾಮಾನುಗಳು ಕೆಲವರಿಗೆ ಸಹಾಯ ಮಾಡುವ ರೀತಿಯಲ್ಲಿ ಟೆಂಡರ್ ಕಾಲ್‌ಫಾರ್ ಮಾಡುವುದು ಆಷ್ಟೇ ಅಲ್ಲ, ನಗೊಲಷಿಯೇಷನ್ಸ್ ಮಾಡಿ ಕೆಲವು ಸಾಮಾನುಗಳನ್ನು ಕೊಳ್ಳುತ್ತಾರೆ ಎನ್ನುವ ವಿಚಾರದಲ್ಲಿ ಆಪಾದನೆ ಬಂದಿದೆ. ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ನಾನಾ ತರಹ ನೀತಿಯನ್ನು ಅನುಸರಿಸಿಕೊಂಡು ಬಂದಿದ್ದಾರೆ. ನನಗೆ ಗೊತ್ತಿರುವ ಹಾಗೆ ಕಳೆದ ಸಾಲಿನಲ್ಲಿ ಶ್ರೀಮಾನ್ ಟಿ. ಚನ್ನಯ್ಯನವರು ಈ ಬೋರ್ಡ್‌ಗೆ ಅಧ್ಯಕ್ಷರಾಗಿದ್ದರು, ಆಮೇಲೆ ಮತ್ತೊಬ್ಬರು ಬಂದರು, ಇವರ ನಂತರ ಇನ್ನೊಬ್ಬರು ಬಂದರು ಈ ರೀತಿ ಒಬ್ಬರಾದ ಮೇಲೆ ಒಬ್ಬರು ಅಧ್ಯಕ್ಷರು ಬರುತ್ತಾರೆ. ಯಾವ ಕಾಲದಲ್ಲೂ ಕೂಡ ಒಂದು ನಿರ್ದಿಷ್ಟ ನೀತಿಯನ್ನು ಅನುಸರಿಸಿಕೊಂಡು ಬಂದಿಲ್ಲ ಯಾರಿಗೋ ಕೆಲವರಿಗೆ ಸಹಾಯ ಮಾಡಬೇಕು ಎನ್ನುವ ಉದ್ದೇಶದಿಂದ ಒಬ್ಬ ಕಂಟ್ರಾಕ್ಟರ್ ಸಪ್ಲೈ ಮಾಡುವಂಥಾವನನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರಿಗೆ ಅನುಕೂಲವಾಗುವ ಪರ್ಚೇಸ್ ಪಾಲಿಸಿ ಏನು ಇದೆ ಅದನ್ನು ಅನುಸರಿಸಿಕೊಂಡು ಬಂದಿದ್ದಾರೆ. ಒಂದು ಕಾಲದಲ್ಲಿ ಒಬ್ಬ ವ್ಯಕ್ತಿಗೆ ಎಲೆಕ್ಟ್ರಿಸಿಟಿ ಬೋರ್ಡ್‌ನವರು ಅಡ್ವಾನ್ಸ್ ಕೊಟ್ಟು ಆ ವ್ಯಕ್ತಿಯಿಂದ ಅವರು ಸಾಮಾನುಗಳನ್ನು ಕೊಂಡು ಕೊಳ್ಳಬೇಕು ಎನ್ನತಕ್ಕಂಥ ನೀತಿ ಇತ್ತು. ಈ ರೀತಿಯಾಗಿ ಕೆಲವರಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಟ್ಟು ಕೊಂಡು ಬೋರ್ಡ್‌ನವರು ನಡೆಸಿಕೊಂಡು ಬಂದಿದ್ದಾರೆ. ಈಪ್ರೊತ್ತೂ ಕೂಡ ಸಾಮಾನುಗಳನ್ನು ಕೊಳ್ಳತಕ್ಕಂಥ ರೀತಿ ತಮಗೆ ಬೇಕಾದವರಿಗೆ ಕೊಡುವುದಕ್ಕೋಸ್ಕರ ಟೆಂಡರ್ ಕರೆದು ಅದನ್ನು ವಿಲೇವಾರಿ ಮಾಡುವಾಗ ಅವಸರವನ್ನು ಕರೆದು ನೆಗೋಷಿಯೇಟ್ ರೇಟ್ ಹಾಕಿಸಿ ಕಡಿಮೆ ರೇಟ ಕೊಡುವಂತೆ ಅವರಿಗೆ ಮಾಡಿಸಿ ಹೇಳಿಸಿ ಕೊಡಿಸುವ ಕೆಟ್ಟ ಪದ್ಧತಿ ಇದೆ. ಇದರ ಬಗ್ಗೆ ಒಂದು ನಿರ್ದಿಷ್ಟವಾದ ನೀತಿ ಏನಿದೆ ಅದು ನಾಜೂಕೆಗೇಡಿನ ನೀತಿಯಾಗಿದೆ ಇದನ್ನು ಬಿಡದೆ ಮಾಡುತ್ತಾ ಇರುವುದರಿಂದ ಪಣಕಾಸಿನ ವಿಚಿತಯೂ ಬಹಳ ಕೆಟ್ಟು ಹೋಗಿದೆ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ

ಇತ್ತೀಚೆಗೆ ವಿದ್ಯುಚ್ಛಕ್ತಿ ಮಂಡಲಿಯ ಕಾಗದ ಪತ್ರಗಳು ಸುಟ್ಟು ಹೋದುದರ ಕಾರಣದ ಬಗ್ಗೆ ಶ್ರೀಮಾನ್ ಸಿದ್ದವೀರಪ್ಪನವರು ಈ ಶಾಸನ ಸಭೆಯ ಗಮನವನ್ನು ಸೆಳೆದಿದ್ದಾರೆ. ಈಗ ವಿದ್ಯುಚ್ಛಕ್ತಿ ಮಂಡಲಿಗೆ ನೂತನ ಅಧ್ಯಕ್ಷರು ಬಂದಿದ್ದಾರೆ. ಇವರು ಬಂದಮೇಲೆ ಲೆಕ್ಕ ಪತ್ರಗಳನ್ನು ಸರಿಯಾಗಿ ಇಡುವ ಪದ್ಧತಿಯನ್ನು ಪುನರ್ವಿಮರ್ಶೆ ಮಾಡುವ ಕಾಲ ಬಂದಾಗ ಈ ವಿದ್ಯುಚ್ಛಕ್ತಿ ಮಂಡಲಿಯಲ್ಲಿ ಏನಾಯಿತು ಎಂದರೆ ಒಬ್ಬರ ಲೆಕ್ಕದಲ್ಲಿ ಒಂದು ತಿಂಗಳಿಗೆ ೧೫೮ ರೂಪಾಯಿ ಛಾರ್ಜು ಆಗಿತ್ತು. ಅವರು ಅದನ್ನು ಕಟ್ಟಲಿಲ್ಲ. ಮುಂದಿನ ತಿಂಗಳು ಇದನ್ನೂ ಸೇರಿಸಿಕೊಂಡು ಲೆಕ್ಕ ಹಾಕಬೇಕಾಗಿತ್ತು. ಅವರು ಹಾಗೆ ಮಾಡದೆ ಮುಂದಿನ ಬಾಕಿ ಬಿಟ್ಟುಬಿಡುವುದು ಮುಂದಿನ ತಿಂಗಳು ಏನು ಬರುತ್ತದೋ ಅದನ್ನೇ ಲೆಕ್ಕಕ್ಕೆ ತೆಗೆದುಕೊಳ್ಳುವುದು ಈ ರೀತಿ ಮಾಡಿಕೊಂಡು ಹೋಗಿದ್ದಾರೆ. ಹೀಗಾಗಿ ಒಬ್ಬ ವ್ಯಕ್ತಿಯ ಲೆಕ್ಕದಲ್ಲಿ ೪೦ ಸಾವಿರ ರೂಪಾಯಿ ಹೆಚ್ಚು ಕಡಿಮೆ ಬಂದಿದೆ. ಇದು ತನಿಖೆ ಮಾಡುವ ಕಾಲದಲ್ಲಿ ಗೊತ್ತಾಯಿತು. ಒಬ್ಬ ವ್ಯಕ್ತಿಯ ಲೆಕ್ಕದಲ್ಲಿ ಈ ಒಂದು ಲೆಕ್ಕದ ತನಿಖೆಯಿಂದ ಬೋರ್ಡಿಗೆ ಬರತಕ್ಕಂಥಾದ್ದು ೪೦ ಸಾವಿರ ರೂಪಾಯಿ ತಪ್ಪಿ ಹೋಗಿರುವುದು ಗೊತ್ತಾದ್ದರಿಂದ ಇಂತಹ ದೋಷಗಳು ಇನ್ನು ಎಷ್ಟು ಕಂಡುಬರುತ್ತವೆಯೋ ಏಂದು ಭಾವಿಸಿ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು, ಕೆಳಗಿನ ಅಧಿಕಾರಿಗಳು ಎಲ್ಲಾ ಸೇರಿ ಲೆಕ್ಕದ ಪುಸ್ತಕಗಳನ್ನು ಬೆಂಕಿಗೆ ಇಟ್ಟು ಭಸ್ಮ ಮಾಡಿದ್ದಾರೆ. ಈ ರೀತಿ ಸುಳ್ಳು ಲೆಕ್ಕ ಬರೆದದ್ದು ಕಂಡುಬಂದಿದೆ ; ನಮಗೆ ಶಿಕ್ಷೆ ಆಗುತ್ತದೆ ಎಂದು ತಿಳಿದು ಲೆಕ್ಕಪತ್ರವನ್ನೇ ಸುಟ್ಟು ಲೆಕ್ಕದ ಪುಸ್ತಕವನ್ನೇ ಇಲ್ಲದಂತೆ ಮಾಡಿಬಿಟ್ಟಿದ್ದಾರೆ. ಅದಕ್ಕೆ ನಾನಾದರೂ ಕೂಡ ಹೇಳುವುದು ಇದಕ್ಕೆ ಯಾರೋ ಅಧಿಕಾರಿಯ ಕೈವಾಡ ಇದೆ. ಆದುದರಿಂದ ಇದನ್ನು ಮೇಲ್ವಿಚಾರಣೆ ಮಾಡಿ ಪತ್ತೆ ಹಿಡಿದು ಸರ್ಕಾರ ಅವರಿಗೆ ಗುರುತರವಾದ ಶಿಕ್ಷೆ ಕೊಟ್ಟು ಹೊರತು ಈ ಇಲಾಖೆಯಲ್ಲಿ ಕಟ್ಟುನಿಟ್ಟಾಗಿ ಯಾವುದನ್ನೂ ಜಾರಿಗೆ ತರಲಿಕ್ಕೆ ಸಾಧ್ಯ ಇಲ್ಲ ಎಂದು ನಾವು ಹೇಳಬೇಕಾಗಿದೆ. ಇದಕ್ಕೆ ಸಂಬಂಧಪಟ್ಟವರು ಯಾರೇ ಆಗಲಿ ಈ ವಿಷಯದಲ್ಲಿ ಒಂದು ಕಟ್ಟುನಿಟ್ಟಾಗಿ ನಿಯಮವನ್ನು ಜಾರಿಗೆ ತರಬೇಕು ಮನಸ್ಸು ಮಾಡಿ ವಿಚಾರಣೆ ಮಾಡಿದರೆ ಅಧಿಕಾರಿಗಳ ತಪ್ಪು ಹೊರಗೆ ಬರುತ್ತದೆ.

ಇನ್ನೊಂದು ವಿಷಯ ಏನೆಂದರೆ ನನಗೆ ಗೊತ್ತಿರುವ ಹಾಗೆ ಈ ಬೋರ್ಡಿಗೆ ಹೊಸದಾಗಿ ಬಂದಿರತಕ್ಕಂಥ ಅಧ್ಯಕ್ಷರು ಶ್ರೀಮಾನ್ ಅಪ್ಪರವರ ಮೇಲೆ ಕೆಲವು ವಿಚಾರಗಳನ್ನು ಅವರ ಇಲಾಖೆಯ ಅಧಿಕಾರಿಗಳಿಂದಲೇ ಕೇಳುತ್ತಿದ್ದೇವೆ. ಏನು ಸ್ವಾಮಿ, ನನ್ನ ಇಲಾಖೆಗೆ ಈ ಒಂದು ಪಿಶಾಚಿ ಬಂದು ಬೆನ್ನು ಹತ್ತಿಕೊಂಡು ಕೂತು ಬಿಟ್ಟು ಪ್ರತಿಯೊಂದೂ ಪರೀಕ್ಷೆ ಮಾಡುವುದಕ್ಕೆ ಬರುತ್ತಾನೆ ಅನ್ನತಕ್ಕಂಥ ದೂರು

(ಶ್ರೀ ಎಸ್. ಶಿವಪ್ಪ)

ಬಂದಿದೆ. ಇದರಿಂದ ಏನಾಗುತ್ತದೆ ಎಂದರೆ ಯಾರು ಕರಪ್ಟ ಆಗಿದ್ದರೋ, ಯಾರು ಈ ದೋಷಕ್ಕೆ ಕಾರಣರಾಗಿದ್ದರೋ ಅಂಥಹ ಅಧಿಕಾರಿಗಳ ಕೈವಾಡ ಈ ಇಲಾಖೆಯಲ್ಲಿ ಇದೆ ಎಂದು ಗೊತ್ತಾಗುತ್ತದೆ. ನಾನು ಈವೊತ್ತಿನ ದಿವಸ ಎಚ್ಚರಿಕೆ ಕೊಡುತ್ತೇನೆ. ಈ ಇಲಾಖಾ ಮುಖ್ಯಾಧಿಕಾರಿ ನಿಷ್ಪಕ್ಷಪಾತ ವಾಗಿರುವುದರಿಂದ ಈ ತರಹ ದೂರುಗಳನ್ನು ಹೇಳತಕ್ಕಂಥ ಅಧಿಕಾರಿಗಳನ್ನು ನಾನು ಕೇಳಿದ್ದೇನೆ. ಅದುದರಿಂದ ಇದರ ಹಿನ್ನೆಲೆಯಾಗಿ ಅಧಿಕಾರಿಗಳು ನಾವು ಮಾಡಿದ ತಪ್ಪುಗಳು ಗೊತ್ತಾಗುತ್ತದೆ ಎಂದು ತಿಳಿದು ಈ ಲೆಕ್ಕಪತ್ರಕ್ಕೆ ಬೆಂಕಿಹಾಕಿದ್ದಾರೆ. ಇಂತಹ ಕೆಲಸಗಳನ್ನು ಮಾಡುವುದರಲ್ಲಿ ಅವರು ಖಿದೀಮ ರಾಗಿದ್ದಾರೆ. ಈ ವಿಷಯ ತನಿಖೆ ಮಾಡುವಂಥ ಕಾಲದಲ್ಲಿ ಈ ದೋಷಗಳನ್ನು ತಪ್ಪಿಸುವ ಕಾಲದಲ್ಲಿ ಇಂತಹ ಅನಾಚಾರ ನಡೆದಿದೆ. ಇದನ್ನು ಸರ್ಕಾರದವರು ತೀಪ್ರವಾಗಿ ಪರಿಶೀಲನೆ ಮಾಡಿ ತಪ್ಪು ಮಾಡಿದ ಅಧಿಕಾರಿ ಯಾರೇ ಇರಲಿ ಇದರ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಹೇಳುತ್ತೇನೆ. ಈ ವಿದ್ಯುಚ್ಛಕ್ತಿ ಮಂಡಲಿಗೆ ಕೆಲವು ಕಂಟ್ರಾಕ್ಟರ್ಸ್ ಸೇರಿಕೊಂಡಿದ್ದಾರೆ. ಹಿಂದೆ ಕೆಲವು ಫರ್ಮ್‌ಗಳಿಗೆ ಯಾವ ರೀತಿ ಆಶ್ರಯ ಕೊಟ್ಟಿದ್ದರೋ ಆ ಖಿದೀಮರೇ ೪-೬ ವರ್ಷದಿಂದಲೂ ಸೇರಿಕೊಂಡಿದ್ದಾರೆ. ಈಗ ಟೆಂಡರ್ ಕೊಟ್ಟಿರುವ ವೇಳೆಯಲ್ಲಿ ಆ ಕಂಟ್ರಾಕ್ಟರ್‌ಗಳಲ್ಲಿ ಕೆಲವು ಕಂಟ್ರಾಕ್ಟರುಗಳಿಗೆ ಈ ಕೆಲಸ ಸಿಕ್ಕಿಲ್ಲ. ಆದುದ ರಿಂದ ಇದರ ಬಗ್ಗೆ ಏನು ದೂರು ಬಂದಿದೆ ಎಂದರೆ ಈ ಇಲಾಖೆ ಏನೂ ಕೆಲಸ ಮಾಡುತ್ತಾ ಇಲ್ಲ. ಲಂಚ ರುಷುವತ್ತುಗಳು ಜಾಸ್ತಿಯಾಗಿದೆ. ಕಂಟ್ರಾಕ್ಟ್ ಸರಿಯಾಗಿ ಕೊಟ್ಟಿಲ್ಲ ಎಂದು ಹೇಳುತ್ತಿದ್ದಾರೆ. ಯಾವ ಖಿದೀಮರು ಈ ಇಲಾಖೆಯಲ್ಲಿ ವರ್ಷಾನುಗಟ್ಟಲೆ ತಾವು ಸ್ವೀಚ್ಛೆಯಾಗಿ ವರ್ತನೆ ಮಾಡುತ್ತಿದ್ದರೋ ಅಂಥವರೇ ನಮ್ಮ ಹತ್ತಿರ ಬರುತ್ತಿದ್ದಾರೆ ಈ ವಿದ್ಯುಚ್ಛಕ್ತಿ ಇಲಾಖೆಗೆ ಈ ರೀತಿ ಕೆಟ್ಟ ಹೆಸರು ಬರುತ್ತ ಇದೆ. ಇದೇನೂ ಹೊಸದಾಗಿ ಬಂದಿದ್ದಲ್ಲ. ೭-೮ ವರ್ಷದಿಂದಲೂ ಬಂದ ಥ ಅನ್ಯಾಯ ಈವೊತ್ತು ಮುಂದುವರಿದುಕೊಂಡು ಬರುತ್ತಾ ಇದೆ. ಈವೊತ್ತು ಹೊಸ ಅಧ್ಯಕ್ಷರನ್ನು ನೇಮಿಸಿದ್ದರಿಂದ ಈ ಒಂದು ವರ್ಷದಲ್ಲೇ ಇದರಲ್ಲಿ ಜನಗಳು ಏನು ನಂಬಿಕೆ ಇಟ್ಟಿದ್ದರು ಎಂದು ನಾವು ಕೇಳಿದ್ದೇವೆ ಇವೆಲ್ಲಾ ಹಲವಾರು ವರ್ಷಗಳಿಂದ ನಡೆದುಕೊಂಡು ಬರುತ್ತಾ ಇದೆ. ಆದುರಿಂದ ಇದನ್ನು ಪತ್ತೆ ಹಚ್ಚಿ ದಕ್ಷತೆಯಿಂದ ವಿಚಾರ ಮಾಡದೇ ಹೋದರೆ ಎಲೆಕ್ಟ್ರಿಸಿಟಿ ಬೋರ್ಡಿಗೆ ನಾವು ಎಷ್ಟು ಬಂಡವಾಳ ಹಾಕಿದರೂ ಅದರಿಂದ ಏನೂ ಪ್ರಯೋಜನ ಬರುವುದಿಲ್ಲ ಎಂದು ಹೇಳುತ್ತೇನೆ. ಈವೊತ್ತು ನೂರಾರು ಮೈಲಿ ಟ್ರಾನ್ಸ್‌ಮಿಷನ್ ಲೈನನ್ನು ತೆಗೆದುಕೊಂಡಿದ್ದಾರೆ. ಇದಕ್ಕೆ ಬೇಕಾದಂಥ ಇನ್ಸ್‌ಮೆಂಟ್ಸ್‌ನ್ನು ಕೇಬಲ್ಸ್ ಸಪ್ಲೈ ಮಾಡತಕ್ಕಂಥ ಬಾಂಬೆ ಫರ್ಮ್‌ನವರಿಗೆ ಮೊದಲಿನಿಂದಲೂ ಕೊಟ್ಟುಕೊಂಡು ಬಂದಿದ್ದರು. ಅವರಿಗೆ ಈವೊತ್ತಿನ ದಿವಸ ಅಸಮಾಧಾನವಾಗಿದೆ. ಅವರಿಗೆ ಈ ದಿವಸ ಕಂಟ್ರಾಕ್ಟ್ ಸಿಗದೇ ಹೋಗಿರಬೇಕು. ಆದುದರಿಂದ ಅವರೇ ಈವೊತ್ತಿನ ದಿವಸ ಅನೇಕ ರೀತಿಯ ದೂರುಗಳನ್ನು ತರುತ್ತಿದ್ದಾರೆ. ಎಲೆಕ್ಟ್ರಿಸಿಟಿ ಬೋರ್ಡ್‌ನಲ್ಲಿ ಕನ್‌ಸಲ್ಟೆಟಿವ್ ಕಮಿಟಿಯಲ್ಲಿ ನಾನು ೪ ವರ್ಷದ ಹಿಂದೆ ಒಬ್ಬ ಮೆಂಬರ ಆಗಿದ್ದೆ. ಅಂದಿನ ಅಧ್ಯಕ್ಷರಿಗೂ ಮತ್ತು ಆಡಳಿತದ ಸದಸ್ಯರಾದ ಶ್ರೀಮಾನ್ ಚೆನ್ನಯ್ಯನವರಿಗೂ ಹೇಳಿದೆ. ಈವೊತ್ತಿನ ದಿವಸ ಅತಹವ ರನ್ನೆಲ್ಲಾ ತಪ್ಪಿಸುವುದಕ್ಕೆ ಇದನ್ನೆಲ್ಲಾ ನುಂಗುತ್ತಿದ್ದೀರಿ ಎಂದು ಬಹಳ ವಿಷಾದದಿಂದ ಹೇಳುತ್ತಿದ್ದೇನೆ. ಈ ವಿಚಾರವನ್ನು ಹಿನ್ನೆಲೆಯಾಗಿ ಇಟ್ಟುಕೊಂಡು ಈ ವಿದ್ಯುಚ್ಛಕ್ತಿ ಮಂಡಲಿ ಏನು ಇದೆ, ಇವರ ವ್ಯವಹಾರಗಳು ಯಾವರೀತಿ ನಡೆಯುತ್ತಾ ಇದೆ ಇದನ್ನು ಪರಿಶೀಲನೆ ಮಾಡತಕ್ಕಂಥ ಕಾಲದಲ್ಲಿ ಈ ಇಲಾಖೆಯಲ್ಲಿರತಕ್ಕಂಥ ಹಳೆಯ ಹೆಗ್ಗಣಗಳು ಏನು ಇದ್ದಾರೋ ಅವರಿಗೆ ಶಿಕ್ಷೆ ಮಾಡಿದ ಹೊರತು ಈ ಇಲಾಖೆ ಮುಂದು ವರೆಯುವುದಿಲ್ಲ. ಈ ಇಲಾಖೆಯ ಜವಾಬ್ದಾರಿ ಹೊತ್ತಿರತಕ್ಕಂಥ ಮಂಖ್ಯಮಂತ್ರಿಗಳಿಗೆ ನಾನು ಎಚ್ಚರಿಕೆಯ ಮಾತನ್ನು ಹೇಳುತ್ತೇನೆ.

ನಾನು ಇದರ ಬಗ್ಗೆ ಇನ್ನೊಂದು ಮಾತ್ರ ಹೇಳುತ್ತೇನೆ. ಈ ವಿದ್ಯುಚ್ಛಕ್ತಿ ಮಂಡಲಿಯ ಅಧಿಕಾರ ವನ್ನು ಸರಿಯಾಗಿ ನೋಡಿಕೊಳ್ಳಬೇಕಾದು ಅತಿ ಅವಶ್ಯಕ. ಇವರ ಕರ್ತವ್ಯ ವ್ಯಾಪ್ತಿ ವಿಸ್ತರಣೆ ಆಗುತ್ತಾ ಇದೆ. ನಮ್ಮ ದೇಶದಲ್ಲಿ ವಿದ್ಯುಚ್ಛಕ್ತಿ ಉತ್ಪನ್ನ ಹೇರಳವಾಗಿ ಸಿಕ್ಕುತ್ತದೆ. ಶರಾವತಿಯಲ್ಲಿ ೮ ಯೂನಿಟ್‌ಗಳು ಕೆಲಸ ಮಾಡಿದರೆ ಆದರಲ್ಲಿ ಉತ್ಪತ್ತಿಯಾಗತಕ್ಕಂಥ ವಿದ್ಯುಚ್ಛಕ್ತಿಯನ್ನು ಮೈಸೂರು ದೇಶಕ್ಕೆಲ್ಲಾ ಉಪಯೋಗಿಸಿಕೊಂಡು ಹೊರಗಡೆಗೂ ಹರಿಚುವ ಸಾಮರ್ಥ್ಯ ಬಂದಿದೆ ಇದು ದುರದೃಷ್ಟಕರವಾದ ವಿಚಾರ. ವಿದ್ಯುಚ್ಛಕ್ತಿ ಹಂಚಬೇಕಾದರೆ ಟ್ರಾನ್ಸ್‌ಮಿಷನ್ ಲೈನನ್ನು ಪೂರ್ವಭಾವಿಯಾಗಿ ಕೊಡ ಬೇಕಾಗುತ್ತದೆ. ಈಗಿನ ಆಧುನಿಕ ರೀತಿಯಲ್ಲಿ ಕರೆಂಟನ್ನು ಹೆಚ್ಚು ಉಪಯೋಗಿಸುವ ಬಗ್ಗೆ ಈಗ ಹೆಚ್ಚು ಅವಕಾಶ ಇರುವುದರಿಂದ ಆಧುನಿಕ ರೀತಿಯಲ್ಲಿ ಟ್ರಾನ್ಸ್‌ಮಿಷನ್ ಲೈನನ್ನು ಎಲ್ಲಾ ಕಡೆಯೂ ಹಾಕಬೇಕು ಈ ರೀತಿ ಟ್ರಾನ್ಸ್‌ಮಿಷನ್ ಲೈನ್ ಹಾಕಿ ನಮ್ಮ ವಿದ್ಯುಚ್ಛಕ್ತಿಯನ್ನು ಕಡಿಮೆ ರೇಟಿನಲ್ಲಿ ಕೊಡುವಂತೆ ಮಾಡಬೇಕು. ನಮ್ಮ ದೇಶದಲ್ಲಿ ಉತ್ಪತ್ತಿಯಾದ ಕರೆಂಟನ್ನು ನಮ್ಮ ದೇಶದಲ್ಲಿಯೇ ಉಪಯೋಗಿಸುವಂತೆ ಅವಕಾಶ ಮಾಡಿಕೊಡಬೇಕು ಎಂದು ಹೇಳುತ್ತೇನೆ. ನಾನು

ಇನ್ನು ಹೇಳುವುದಕ್ಕೆ ಹೋಗುವುದಿಲ್ಲ. ಸರ್ಕಾರದವರಿಗೆ ಇಷ್ಟು ಮಾತ್ರ ಹೇಳುತ್ತೇನೆ. ಈ ವಿದ್ಯುಚ್ಛಕ್ತಿ ಮಂಡಲಿ ಬಗ್ಗೆ ಲಂಚದ ಅಪಾದನೆಗಳು ಇನ್ನೂ ಅನೇಕ ಅಪಾದನೆಗಳು ಬಂದಿವೆ. ಇನ್ನು ಮುಂದೂ ಬರತಕ್ಕವಾಗಿವೆ. ಅವುಗಳನ್ನು ವಿಚಾರ ಮಾಡಬೇಕು ಎಂದು ಹೇಳುತ್ತೇನೆ. ಈ ಶಾಸನ ಸಭೆಯಲ್ಲಿ ಈಗಾಗಲೇ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕಮಿಟಿ ಎನ್ನುವುದನ್ನು ಮಾಡಿದ್ದಾರೆ ಈ ಕಮಿಟಿಯವರು ರಾಜ್ಯದಲ್ಲಿರುವ ಸಾರ್ವಜನಿಕರ ಕೈಗಾರಿಕಾ ಸಂಸ್ಥೆಗಳನ್ನು ಪರಿಶೀಲನೆ ಮಾಡಬೇಕು ಮತ್ತು ಇದರ ಜವಾಬುದಾರಿಯನ್ನು ಹೊತ್ತಿರುವುದರಿಂದ ಈ ಕಮಿಟಿಯವರ ಬೇರೆ ಕೈಗಾರಿಕಾ ಸಂಸ್ಥೆಗಳನ್ನು ತನಿಖೆ ಮಾಡುವುದಕ್ಕೆ ಮೊಟ್ಟಮೊದಲು ಪ್ರಪ್ರಥಮವಾಗಿ ನಮ್ಮ ರಾಜ್ಯದಲ್ಲಿರುವ ಎಲೆಕ್ಟ್ರಿಸಿಟಿ ಬೋರ್ಡಿನ ಲೆಕ್ಕಪತ್ರಗಳನ್ನು ಸರಿಯಾಗಿ ಪರಿಶೀಲನೆ ಮಾಡಬೇಕೆಂದು ನಾನು ಅವರಲ್ಲಿ ಕೇಳುತ್ತೇನೆ. ಇವರು ಇದರ ಲೆಕ್ಕಪತ್ರಗಳನ್ನು ಪೂರ್ಣವಾಗಿ ಪರಿಶೀಲನೆ ಮಾಡಿದ ಮೇಲೆ ಬಹುಶಃ ಮುಂದಿನ ಅಧಿವೇಶನ ಸೇರುವುದರೊಳಗಾಗಿ ಅವರಿಂದ ಇದರ ಬಗ್ಗೆ ಒಂದು ರಿಪೋರ್ಟು ಕೊಟ್ಟರೆ ಆ ನಂತರ ನಾವು ಇಲ್ಲಿ ಇದರ ಬಗ್ಗೆ ಪೂರ್ಣವಾಗಿ ಚರ್ಚೆ ಮಾಡಲು ಒಂದು ಅವಕಾಶ ಸಿಗುತ್ತದೆ. ಈ ರೀತಿ ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿಯವರು ಎಲೆಕ್ಟ್ರಿಸಿಟಿ ಬೋರ್ಡಿನ ಕೆಲಸವನ್ನು ಪ್ರಥಮವಾಗಿ ತೆಗೆದುಕೊಳ್ಳಬೇಕೆಂದ ಸಲಹೆ ಮಾತಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI H. SIDDAVEERAPPA.—(Harihara)Sir, I shall confine my remarks to the fire incident about which I have given a notice. As we are aware, on 14th March 1970 at 12-45 P. M. the MSEB revenue section was burnt and it is reported that the account ledegers—some estimate the loss to be about a core of rupees have been burnt. It is reported that valuable documents have been burnt. There are various consumers, they had their ledgers and they have not got any accounts to show how much they have paid and how much they yet to pay. It is said that this is a very, very important motter that should cause grave concern not only to the Electricity Board but also to the Government. It is said that all this has arisen because there were cases of misappropriation pending and the persons involved had manipulated even some accounts and even when they were found, one man came forward to pay some amount back. The revenue accounts there have not yet been audited from 1963 and are in a pell mell. When such was the position, this fire has taken place. I have got information thah it wss a clear act of sabotage, and that with a view to save those who are invovled in the manipulation and misappropriation of accounts they have caused this fire. I would like to know why these accounts were not audited from 1963 After the fire took place, about 15 or 20 auditors there have been kept under suspension. Everything is not well with regard to these accounts and we are even told that though some of the parties paid their accounts. have not been credited the amounts they have paid. What is due from them has not been taken into account with the result that the Electricity Board has lost a considerable amount on account of bad accountancy and bad accounting.

There are no safeguards even agairst wrong readings of meters, I am told that one ex-Chief Accounts Officer—I don't know his name—has been reappointed for a period of two years. It appears that he has been reappointed with a purpose. Often this gentleman is sent by the present Chairman to Hydarabad to watch the cases that are pending against him The other day the Hon. Minister Sri Puttaswamy said

(Sri H. SIDDAVRAPPA)

that there is no charge of corruption against that officer. He said that probably for the replacement of an old air cooler by a new one they sent enquiries to the Mysore Government, and that the Chief Minister wrote back saying that since the officer is no longer in their service they may hold their own enquiry. It passes anybody's comprehension that for the replacement of an old air cooler by a new one, there can be an enquiry against an officer pending for last two years. I know he was in charge of Heavy Electricals at Hyderabad, there were two enquiries pending against him. One was for corruption charges which is handled by the Central Bureau of Intelligence and the other was by the Audit Enquiry Committee, New Delhi. I do not know whether the officer is sitting in this House. I want the Hon. the Chief Minister to get this information from the officer. If he chooses he may tell the House whether these enquiries are pending and if so for what period. If it is only for the replacement of an old air cooler by a new one, do we imagine that there may be an eqnuiry pending for for two years. I know definitely that even last month there was an enquiry. I cannot understand why the Government should try shield officers when they know that these things are happening.

It is stated in the latest report that MSEB plans to borrow Rs. 17 crores for various purposes My own feeling is that this is not a Poard which should be entrusted with such huge amounts because we are suspicious that these sums are not properly utilised. On page 10 of the Annual Financial Statement of the Board what has been purchased during the period of the present Chairman is mentioned. In 1968-69 they purchased Rs 1,066 lakhs worth of stores; in 1969-70 they purchased Rs. 13,332 lakhs worth of stores and in 1970-71 they have purchased 600 lakhs worth of stores. Ever since the inception of the Board the total purchases have not been even half of this That means they are purchasing quite a lot of stores. My own information is that whether there is need or not, orders are simply placed. Take for instance, underground cable. If cable is available, it is put whether there is need or not. I also learn that in a city like Bangalore where there were unburnt and servi eable lamps, they have been replaced by new ones because they have purchased them and they will have to be utilised somehow. Why do they give an indent for such a huge order? Therefore, this policy of indiscriminate purchases without assessing the needs, has led to a lot of money being wasted. And look at the way these things are purchased. I see an advertisement in the Deccan Herald of 3rd April 1970 and it reads thus.

"Mysore State Electricity Board Registration of firms for supplies :

Indending stock suppliers who are desirous of registering themselves with the Mysore Electricity Board for arranging

for the supply of the following category of materials are hereby informed that applications for new registration will be entertained. Applications can be had on request and on payment of Rs. 3 in cash or by money order so as to reach the Chief Engineer (General) MSEB, New Registration, for the period from 1st April 1970 to 31st March 1971 Other rules and conditions regarding registration will be made available along with the application forms."

This is the way in which huge stocks are sought to be purchased by the Electricity Board of Mysore. No tenders have been called for. The suppliers will have to register themselves. Who are all the people that are so registered ? Why should they be registered? Secretly and clandestinely why should they be asked to give their quotations. Take, on the other hand, the various advertisements issued by the various other Electricity Boards. I read here an advertisement from the 'Hindu' paper of 2nd April. It is from the Tamilnadu Electricity Board. You see the difference. The advertisement is as follows :

TAMIL NADU ELECTRICITY BOARD

Tender Notice

"Sealed tenders superscribed "Specification No....." due on 15-4-70 are invited .....for the supply of the following items : namely.....

The tenders will be opened at 3-00 P. M. on the due date.

"The earnest Deposit will be refunded to the successfull tenderer, only on satisfactory fulfilment of the contract."

This is not the usual form about which we are all accustomed. Let them have open tenders and advertisements. It is not so in the case of our Electricity Board. In this case, you have to register your name. The suppliers become a closed class The Electricity Board get closet with these names that alone come into the picture. My own feeling is that there is secret or clandestine understanding between the Chairman and those whose names are to be found as having been registered. I understand that this procedure has come into being after this new Chariman hasbeen inducted into his office. This procedure the main cause or the root cause for corruption in this Department. The Board will ultimately try to find Government's favourites. Sometimes they have been even issuing orders to those who have quoted more than what others quote. I feel that immediate action must be taken to see that regular tenders are invited accroding to the precedure that is followed in other States.